3743 (4365) : ಶ್ರೀ ಮೋಹನ ಕೃಷ್ಣಶೆಟ್ಟಿ (ಕುಮಟ)

ದಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕುಮಟಾ ತಾಲ್ಲೂಕು ಆಸ್ಪತ್ರೆಯು 50 ಹಾಸಿಗೇಯುಳ್ಳ ಆಸ್ಪತ್ರೆಯಾಗಿದ್ದು ಇಡೀ ತಾಲ್ಲೂಕಿನ ನಾಗರೀಕರಿಗೆ ಆರೋಗ್ಯ ಸೇವೆ ಒದಗಿಸುತ್ತಿದ್ದು ಒಂದು ಮೂಳೆ ತಜ್ಞ ವೈದ್ಯರ ಮಂಜೂರಾತಿ ಇಲ್ಲದಿರುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಆ. ಅಲ್ಲದೆ ಮಕ್ಕಳ ತಜ್ಞ ವೈದ್ಯರು, ಅರವಳಿಕೆ ತಜ್ಞ ವೈದ್ಯರ ಹುದ್ದೆಯೂ ಖಾಲಿಯಿರುವುದನ್ನು ಭರ್ತಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಇ. ಆಸ್ಪತ್ರೆ ಕಟ್ಟಡವನ್ನು ಕೆ,ಹೆಚ್,ಎಸ್,ಡಿ,ಪಿಯವರು ನಿರ್ವಹಣೆ ಮಾಡುತ್ತಿಲ್ಲವಾದ ಕಾರಣ ನಿರ್ವಹಣೆಗೆ ಏನು ಕ್ರಮ ಕೈಗೊಳ್ಳಲಾಗಿದೆ?

ದಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಸಚಿವರು)

ಅ. ಮಾರ್ಗಸೂಚಿ ಪ್ರಕಾರ 50 ಹಾಸಿಗೆಗಳುಳ್ಳ ಆಸ್ಪತ್ರೆಗಳಿಗೆ ಮೂಳೆ ತಜ್ಞೆ ವೈದ್ಯರ ಹುದ್ದೆ ಮಂಜೂರಾತಿ ಇರುವುದಿಲ್ಲ.

ಆ. ಮಕ್ಕಳೆ ತಜ್ಞರ ಮತ್ತು ಅರವಳಿಕ ತಜ್ಞರ ಹುದ್ದೆಯನ್ನು ಗುತ್ತಿಗೆ ಆಧಾರ ಮೇಲೆ ಹಾಗೂ ಖಾಸಗಿ ತಜ್ಞ ವೈದ್ಯರನ್ನು ಸಂದರ್ಶಕ ವೈದ್ಯರನ್ನಾಗಿ ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಯವರಿಗೆ ಅನುಮತಿ ಕೊಡಲಾಗಿದೆ.

ಇ. ಜಿಲ್ಲಾ ಪಂಚಾಯತ್ ವತಿಯಿಂದಲೇ ನಿರ್ವಹಣೆ ಮಾಡಲಾಗುತ್ತಿದೆ.

3744 (4366) ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟ)

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. 1992 ಪೂರ್ವದಲ್ಲಿ ಶಾಶ್ವತ ಅನುದಾನ ರಹಿತವಾಗಿ ಅನುಮತಿ ನೀಡಿದ ಖಾಸಗಿ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳನ್ನು ಈಗಲೂ ಅನುದಾನ ರಹಿತವಾಗಿಯೇ ನಡೆಸಿಕೊಂಡು ಹೋಗಲು ಸಂಸ್ಥೆಗಳಿಗೆ ತೀರಾ ತೊಂದರೆ ಪರಿಸ್ಥಿತಿ ಇರುವುದನ್ನು ಸರ್ಕಾರ ಮನಗಂಡಿದೆಯೇ;

ಆ. ಈ ಶಾಲೆಗಳನ್ನು ಹಿಂದುಳಿದ, ಆರ್ಥಿಕವಾಗಿ ಕಷ್ಟಕರ ಪರಿಸ್ಥಿತಿಯಲ್ಲಿರುವ ಸಂಸ್ಥೆಗಳು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ. ಬಂದಿದ್ದರೆ ಅನುದಾನ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆ;

ಈ. ಕ್ರಮ ಕೈಗೊಂಡರೆ ಯಾವಾಗ ಅನುದಾನ ನೀಡಲಾಗುವುದು?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳಿಗೆ ಅನುದಾನ) ನಿಯಮಗಳು, ಅದನ್ನು ಈ ಕೆಳಗೆ ಉದ್ದರಿಸಿದೆ.

"3. Ineligibility of certain Private Education Institutions to get Grant-in-aid.

Not withstanding anything contained in order nO. (ED 26 SEP 96, dated: 08.02.1996) which is continued to be in force in accordance with section 146, all Private Educational Institutions (including all private Educational Institutions run by Scheduled Caste and Scheduled Tribe) Established or Permitted to be so Established on or after the First day of June 1987, (or such of those institutions Permitted to be Establish Prior to the first day of June 1987, but started functioning from the academic year 1987-88 and onwards) for imparting Primary Education, Secondary Education or Pre-University Education shall be permanently ineligible for grant-in-aid.

Provided that nothing contained in this rule shall be applicable to Private Educational Institutions imparting Primary Education and Secondary Education Established between First day of June 1987 and First day of April 1992 by the Managing Committee comprising an individual or a body of individuals of whom all are persons belonging to the Schedule Castes or the Scheduled Tribes"

ಮೇಲೆ ಉದ್ದರಿಸಿದ ನಿಯಮದ ಪ್ರಕಾರ

ದಿನಾಂಕ: 01.06.87 ರಿಂದ 31.03.92ರ ಅವಧಿಯಲ್ಲಿ ಆರಂಭವಾದ ಪ.ಜಾ/ಪ.ವರ್ಗಗಳ ಆಡಳಿತ ಮಂಡಳಿಗಳ ವತಿಯಿಂದ ಸತತವಾಗಿ ನಡೆಸುತ್ತಿರುವ ಶಾಲೆಗಳನ್ನು ಹೊರತುಪಡಿಸಿ ಉಳಿದ ವರ್ಗಗಳು ನಡೆಸುತ್ತಿರುವ ಶಾಲೆಗಳು ಅನುದಾನದ ವ್ಯಾಪ್ತಿಗೆ ಒಳಪಡುವುದಿಲ್ಲ.

ಆ.ಇ.ಈ. ಕ್ರಮ ಸಂಖ್ಯೆ 1 ಕ್ಕೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.